JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಅನುಭಾವ : ಒಂದು ಅವಲೋಕನ

**ರಮೇಶ.ಡಿ**
ಸಂಶೋಧನಾ ವಿದ್ಯಾರ್ಥಿ, ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ (ಜಿಲ್ಲೆ).

ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದ ಭಾರತದಲ್ಲಿ ಅನೇಕ ಬಗೆಯ ಸಾಹಿತ್ಯ ಸೃಷ್ಟಿ ಸೃಜನೆಗೊಂಡಿದೆ. ಜಗತ್ತಿನ ಸಾಹಿತ್ಯ ಪ್ರಕಾರಗಳಿಂದ ಪ್ರೇರಣೆಗೊಂಡು ಇಲ್ಲವೇ ಪ್ರಾದೇಶಿಕ ಪ್ರಭಾವ-ಪರಿಸರಿಗಳಿಗೆ ಒಗ್ಗಿಕೊಂಡು ಮಾನವನ ಅನುಭವದ ಅಭಿವ್ಯಕ್ತಿ ಸಾಹಿತ್ಯದ ರೂಪದಲ್ಲಿ ಹೊರಹೊಮ್ಮಿದೆ. ಕನ್ನಡ ಸಾಹಿತ್ಯದಲ್ಲಿ ಅನುಭಾವದ ಪರಂಪರೆ ಪ್ರಾರಂಭವಾದುದು ೧೨ನೇ ಶತಮಾನದಲ್ಲಿ. ಅನೇಕ ಬಗೆಯ ಶರಣರು ತಾವು ಕಂಡುಂಡ ಅನುಭವಗಳನ್ನು ವಚನಗಳ ರೂಪದಲ್ಲಿ ಹೊರಹಾಕಿದರು. ವಚನಗಳು ಬರೀ ಅನುಭವದ ಅಭಿವ್ಯಕ್ತಿಗಳಾಗಿರದೆ ತಾವು ಕಂಡುಕೊಂಡ ಅನುಭಾವದ ನಿಜರೂಪಗಳಾಗಿ ಕಾಣಿಸುತ್ತವೆ.

'ಅನುಭಾವ' ಎಂಬ ಪದಕ್ಕೆ ಒಂದು ವಿಶಿಷ್ಟವಾದ ಅರ್ಥವಿದೆ. ಅನುಭಾವವೆಂಬುದು ಆತ್ಮ-ವಿದ್ಯೆ, ಅನುಭಾವವೆಂಬುದು ಅಂತರಂಗದ ರತ್ನ, ಅನುಭಾವವೆಂಬುದು ಕೂಸು ಕಂಡ ಕನಸಿನಂತೆ, ಮೂಕ ಮೆದ್ದ ಬೆಲ್ಲದಂತೆ, ಕನ್ಯೆಯ ಸ್ನೇಹದಂತೆ ಹೀಗೆ ಅನೇಕರು ಈ 'ಅನುಭಾವ'ವೆಂಬ ಪದವನ್ನು ಅರ್ಥೈಸಲು ಪ್ರಯತ್ನಿಸಿದ್ದಾರೆ. ಹೀಗಿರುವ 'ಅನುಭಾವ' ಎಂಬುದರ ಅರ್ಥವನ್ನು ಸ್ಥೂಲವಾಗಿ ವಿಸ್ತರಿಸುವುದಾದರೆ ಅದು ಜೀವಾತ್ಮ ಮತ್ತು ಪರಮಾತ್ಮರ ಏಕರಸತ್ವ. ಜೀವ-ಶಿವರ ಐಕ್ಯದ, ಅಂಗಾಂಗಗಳ ಸಮರಸತ್ವದ ಅನುಭವ. ಅದೊಂದು ಅನುಭವ ಎಂಬುದೇನೋ ನಿಜ. ಆದರೆ ಅದು ಇಂದ್ರಿಯಾತೀತ ಅನುಭವ. ಇದನ್ನೇ ನಾವು 'ಅನುಭಾವ' ಎನ್ನುವುದು. ಈ 'ಅನುಭಾವ' ಎಂಬುದನ್ನು ಒಂದೇ ಪದದಲ್ಲಿ ಹೇಳುವುದಾದರೆ ಅದೊಂದು 'ಬಯಲು'. ಹಾಗೆ ನೋಡಿದರೆ ಅಲ್ಲಿ ಏನೂ ಇಲ್ಲ. ನಿಜವಾಗಿ ನೋಡಿದರೆ ಅಲ್ಲಿ ಎಲ್ಲವೂ ಇದೆಯಷ್ಟೇ. ಅನುಭಾವವೆಂಬುದು ದೈವವೂ ಹೌದು, ಭಕ್ತನೂ ಹೌದು.

ಹೀಗೆ ೧೨ನೇ ಶತಮಾನದಲ್ಲಿ ಪ್ರಾರಂಭವಾದ 'ಅನುಭಾವ' ಪರಂಪರೆಯ ಮುಂದುವರಿಕೆಯನ್ನು ೧೪ ಮತ್ತು ೧೫ನೇ ಶತಮಾನದಲ್ಲಿ ಕಾಣಬಹುದು. ೧೪ನೇ ಶತಮಾನದ ಮಹಾಲಿಂಗನ ಏಕೋತ್ತರ ಸ್ಥಲ, ಜಕ್ಕಣ್ಣನ ಏಕೋತ್ತರ ಶತಸ್ಥಲ, ಶಿವಯೋಗ ಪ್ರದೀಪಿಕೆಯಲ್ಲಿ ಹಾಗೂ ೧೫ನೇ ಶತಮಾನದ ದಾಸ ಸಾಹಿತ್ಯದಲ್ಲಿ ಅನುಭಾವದ ಅಭಿವ್ಯಕ್ತಿಯಿದೆ. ಇಷ್ಟೇ ಅಲ್ಲದೆ ಜೈನ ಪುರಾಣಗಳ ಧರ್ಮದೃಷ್ಟಿಯಲ್ಲಿ, ಹರಿಹರ ರಾಘವಾಂಕರ ಕಾವ್ಯವಾಣಿಯಲ್ಲಿ, ಕುಮಾರವ್ಯಾಸನ ಭಕ್ತಿ ಆವೇಶದಲ್ಲಿ, ರತ್ನಾಕರನ ತ್ಯಾಗಭೋಗ ಸಮನ್ವಯದಲ್ಲಿ ಮಹಾಲಿಂಗನ ಅನುಭವಾಮೃತದಲ್ಲಿ 'ಅನುಭಾವ'ವನ್ನು ಕಾಣಬಹುದು. ನಿಜಗುಣ ಶಿವಯೋಗಿಯ ತತ್ವಪದಗಳಲ್ಲಿ, ಕಡಕೋಳ ಮಡಿವಾಳಪ್ಪ ಹಾಗೂ ಶಿಶುನಾಳ ಶರೀಫರ ತತ್ವಪದಗಳಲ್ಲಿಯೂ ಅನುಭಾವದ ಅಭಿವ್ಯಕ್ತಿಯಿದೆ.

ವಚನಕಾರರು ಹಾಗೂ ದಾಸರು ಕಂಡುಕೊಂಡ ಅನುಭಾವಕ್ಕಿಂತಲೂ ಭಿನ್ನವಾಗಿ ಅನುಭಾವವನ್ನು ಕಂಡುಕೊಂಡವರೆಂದರೆ ಸುಮಾರು ೧೮ ಮತ್ತು ೧೯ನೇ ಶತಮಾನದಲ್ಲಿ ಕಂಡು ಬಂದ ತತ್ವಪದಕಾರರು. ತತ್ವಪದಕಾರರದು 'ಅನುಭಾವಿ' ಪರಂಪರೆ. ಈ ಅನುಭಾವಿಗಳು ತಮ್ಮ ಮಾರ್ಗವನ್ನು 'ಬೋಧ' ಮಾರ್ಗವೆಂದು ಕರೆದುಕೊಳ್ಳುತ್ತಾರೆ. ಅದು ಯಾವುದೋ ಶಾಸ್ತ್ರ ಧರ್ಮಗ್ರಂಥಗಳಲ್ಲಿ ನಿಹಿತವಾಗಿರುವುದಿಲ್ಲ. ಬದಲಿಗೆ ಅದು ಗುರುವಿನ ಮಾರ್ಗದರ್ಶನದಲ್ಲಿ ಸ್ವತಂತ್ರವಾಗಿ ಕಂಡುಕೊಳ್ಳಬೇಕಾಗಿರುವಂಥದ್ದು. ಇವರಿಗೆ ಆಕಾರದ ದೇವರ ಅಗತ್ಯವಿಲ್ಲ. ಸಾಂಸ್ಥಿಕ ಜಡತೆ, ಧರ್ಮದಲ್ಲಿನ ಅಪರಿವರ್ತನೀಯತೆಯನ್ನು ಪ್ರತಿರೋಧಿಸುತ್ತಾರೆ. ಗುರುವಿನ ಮಾರ್ಗದರ್ಶನದಲ್ಲಿ ಸಾಧನೆ ಮಾಡಬೇಕೆಂಬುದು ಹಾಗೂ ಸ್ವಂತ ಸಾಧನೆಯಿಂದ ಅರಿವನ್ನು ಪಡೆಯಬೇಕೆಂಬುದು ಅವರ ನಿಲುವಾಗಿತ್ತು.

ವಚನಕಾರರ ಹಾಗೂ ದಾಸರ ಸಾಮಾಜಿಕ ಸಂದರ್ಭಕ್ಕಿಂತ ತತ್ವಪದಕಾರರ ಸಾಮಾಜಿಕ ಬದುಕಿನ ಸಂದರ್ಭ ಭಿನ್ನವಾಗಿರುವುದಕ್ಕೆ ಬಹುಮುಖ್ಯ ಕಾರಣವೇನೆಂದರೆ ಅಂದು ಆಳ್ವಿಕೆಯಲ್ಲಿದ್ದ ಪೇಶ್ವೆ, ನಿಜಾಮ ಹಾಗೂ ಬ್ರಿಟೀಷರ ಪ್ರಭಾವ. ಸಾಮಾನ್ಯ ಮನುಷ್ಯನೂ ಸಹ ಅಧಿಕಾರಶಾಹಿ, ವಸಾಹತುಶಾಹಿ ಹಾಗೂ ಬಂಡವಾಳಶಾಹಿ ಯಂತಹ ವ್ಯವಸ್ಥೆಯನ್ನು ಮೆಟ್ಟಿ ನಿಲ್ಲಬೇಕಾದ ಅನಿವಾರ್ಯತೆಯಿತ್ತು. ಈ ಸಂದರ್ಭಕ್ಕೆ ಜನರನ್ನು ಆಧ್ಯಾತ್ಮದತ್ತ ಕೊಂಡೊಯ್ಯುವ ಜವಾಬ್ದಾರಿಯನ್ನು ತತ್ವಪದಕಾರರು ವಹಿಸಿಕೊಂಡರು. ರಹಮತ್ ತರೀಕೆರೆಯವರು ಹೇಳುವಂತೆ "ತತ್ವಪದಕಾರರು ಎಂದರೆ ನಮ್ಮ ಸಾಮಾಜಿಕ ಸುಧಾರಣೆಗೆ ಯತ್ನಿಸಿದ ವಿರಕ್ತ ಅಭಿವ್ಯಕ್ತಿ" ಎಂಬ ಮಾತನ್ನು ಇಲ್ಲಿ ಗಮನಿಸಬೇಕು. 'ಆಧ್ಯಾತ್ಮ' ಎಂಬುದು ಆತ್ಮ-ಪರಮಾತ್ಮನ ಸಂಬಂಧವನ್ನು ಕುರಿತು ಹೇಳಿದರೆ 'ಅನುಭಾವ' ಎಂಬುದು ಬದುಕಿನ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದನ್ನು ತಿಳಿಸುತ್ತದೆ. ಒಂದು ಧಾರ್ಮಿಕ ನೆಲೆಯಲ್ಲಿ ಅಲೌಕಿಕ ಬದುಕಿನ ಅನುಭವಗಳನ್ನು ಕಟ್ಟಿಕೊಟ್ಟರೆ, ಮತ್ತೊಂದು ನೈತಿಕ ನೆಲೆಯಲ್ಲಿ ಲೌಕಿಕ ಬದುಕಿನ ಅನುಭವಗಳನ್ನು ಕಟ್ಟಿಕೊಡುತ್ತದೆ. ಆಧ್ಯಾತ್ಮ ಮತ್ತು ಅನುಭಾವ ಇವೆರಡು ಒಂದು ನಾಣ್ಯದ ಎರಡು ಮುಖಗಳಿದ್ದಂತೆ.

ವಚನ ಸಾಹಿತ್ಯದಲ್ಲಿ ಅಲ್ಲಮ ಮತ್ತು ಬಸವಣ್ಣ ಹೇಗೋ ಹಾಗೆ ದಾಸಸಾಹಿತ್ಯದಲ್ಲಿ ಕನಕ ಮತ್ತು ತತ್ವಪದ ಸಾಹಿತ್ಯದಲ್ಲಿ ಶರೀಫರು. ಈ ಇಬ್ಬರೂ ಆಧ್ಯಾತ್ಮ ಮತ್ತು ಅನುಭಾವಗಳೆರಡನ್ನು ಸಿದ್ಧಿಸಿಕೊಂಡವರು. ಶರಣರ ಆಧ್ಯಾತ್ಮಿಕ ಆಂದೋಲನದಲ್ಲಿ 'ಅನುಭಾವ' ಹೊರಹೊಮ್ಮಿ ನಂತರ ಅದು ನೇರವಾಗಿ ದಾಸ ಸಾಹಿತ್ಯದ ಹರಿದಾಸರಲ್ಲಿ ಪಡಿಮೂಡಿದೆ. ಈ ಅನುಭಾವದ ದಟ್ಟ ಛಾಯೆಯನ್ನು ಹೆಚ್ಚಾಗಿ ಕನಕದಾಸರಲ್ಲಿ ಕಾಣಲು ಸಾಧ್ಯ. "ಕನಕದಾಸರದು ಭಾವುಕವಲ್ಲದ ಭಕ್ತಿ ಮಾರ್ಗ, ಶುಷ್ಕ ಜಡವಲ್ಲದ ಜ್ಞಾನಮಾರ್ಗ. ಆಚಾರ-ವಿಚಾರಗಳ ಸಮನ್ವಯ ಗಟ್ಟಿಗೊಂಡ ಅನುಭಾವದ ಹರಳುಗಳು ಅಲ್ಲಲ್ಲಿ ಹೊಳೆಯುತ್ತವೆ. ಭಕ್ತಿ, ನೈತಿಕ ನಿಷ್ಠೆ, ಸಾಮಾಜಿಕ ವಿಷಮತೆ, ಅಂತರಂಗ ಶುದ್ಧಿ, ಬಾಹ್ಯಾಂಡಂಬರಗಳು ಈ ಮೊದಲಾದವುಗಳನ್ನು ಕುರಿತು ಅವರ ಕೀರ್ತನೆಗಳು ಅನೇಕ ವೇಳೆ ತುಂಬಾ ಪರಿಣಾಮಕಾರಿಯಾಗಿದ್ದು ಸಾಧಕನ ಕೈದೀವಿಗೆಯಂತಿವೆ"[೧] ಎಂದು 'ಕನಕದಾಸರ ಅನುಭಾವ ಗೀತೆಗಳು' ಎಂಬ ಲೇಖನದಲ್ಲಿ ಡಾ.ಎಚ್.ತಿಪ್ಪೆರುದ್ರಸ್ವಾಮಿಯವರು ಅಭಿಪ್ರಾಯಿಸುತ್ತಾರೆ. ಅಂದರೆ ಅನುಭಾವವೆಂಬುದು ಅಂತರಂಗದಲ್ಲಿನ ಸತ್ಯದರ್ಶನ ಹಾಗೂ ತರ್ಕ ಮತ್ತು ಜಿಜ್ಞಾಸೆಗಳ ಮೂಲಕ ಆತ್ಮ-ಪರಮಾತ್ಮನ ಸ್ವರೂಪವನ್ನು ಅನುಭಾವಿಕ ನಿಲುವಿನಲ್ಲಿ ಕಂಡುಕೊಳ್ಳಲು ಪ್ರಯತ್ನಿಸುವುದು ಎಂದರ್ಥವಾಗುತ್ತದೆ.

ಈ ಹಿನ್ನೆಲೆಯಲ್ಲಿ ಕನಕದಾಸರು ಅನುಭಾವದ ಸಾಧನೆಯ ಹಂತದಲ್ಲಿದ್ದಾಗ ಮೂಡಿ ಬಂದ ಅವರ ಈ ಕೀರ್ತನೆಯನ್ನು ಗಮನಿಸಬೇಕು.

> ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ
> ನೀ ದೇಹದೊಳಗೊ ನಿನ್ನೊಳು ದೇಹವೊ ಹರಿಯೆ ॥ ಅ ॥

ಅದು ತರ್ಕಕ್ಕೆ ಅತೀತವಾದ ಸತ್ಯವೆಂಬುದನ್ನು ಧ್ವನಿಸುವಂತಿದೆ. ಇಲ್ಲಿ ಕನಕದಾಸರು ಹಾಕಿರುವ ಪ್ರಶ್ನೆ ಸರಳವಾದುದಲ್ಲ, ಜಟಿಲವಾದುದು. ಈ ಸೃಷ್ಟಿಯೆಲ್ಲಾ 'ಮಾಯೆ' ಎಂದರೂ 'ನಿ' ಎಂಬಲ್ಲಿ ಸೃಷ್ಟಿಕರ್ತನೊಬ್ಬನಿದ್ದಾನೆ ಎಂಬ ಮಾತು ಬರುತ್ತದೆ. ಹೀಗೆ ಸಾಗುತ್ತಾ ಸಾಗುತ್ತ ಕಟ್ಟಕಡೆಗೆ ಇವೆಲ್ಲವುಗಳು ದೈವಪ್ರೇರಿತವಾದುದು, ಮನುಷ್ಯ ನೆಪಮಾತ್ರ ಎಂಬ ಸತ್ಯದ ದರ್ಶನವಾಗುತ್ತದೆ.

ಮನುಷ್ಯನಿಗೆ ಮೂಲವಾಗಿ ಬೇಕಾದುದೇ ಜ್ಞಾನ. ಈ ಜ್ಞಾನದಿಂದಲೇ ಮನಸ್ಸು, ಬುದ್ಧಿ, ಹೃದಯ ಸಂಸ್ಕಾರಗಳು ಬೆಳೆಯುತ್ತವೆ. ಬದುಕಿನ ಸಾರ್ಥಕತೆಯಾಗುವುದೂ ಇವುಗಳಿಂದಲೇ. ಇಂತಹ ಅನುಭಾವದ ಜ್ಞಾನ ಸಂಪಾದನೆಯನ್ನು ಕನಕದಾಸರು ಅಡುಗೆ ಮಾಡುವ ಕ್ರಿಯೆಗೆ ಹೋಲಿಸುತ್ತಾರೆ.

> ಅಡುಗೆಯನು ಮಾಡಬೇಕಣ್ಣ – ನಾನೀಗ ಜ್ಞಾನ
> ದಡಿಗೆಯನು ಮಾಡಬೇಕಣ್ಣ
> ಅಡುಗೆಯನ್ನು ಮಾಡಬೇಕು / ಮಡಿಸಬೇಕು ಮದಗಳನ್ನು
> ..................................................................
> ಒನಕೆಯಿಂದ ಕುಟ್ಟಿ ಕೇರಿ ತನಗೆ ತಾನೇ ಅದ ಕೆಚ್ಚ
> ನನುವನರಿತು ಇಕ್ಕಬೇಕು ಅರಿವೆಂಬ ತುಂಟರಳಿಸಿ

ತತ್ವ ಭಾಂಡವ ತೊಳೆಯಬೇಕಣ್ಣ – ಸತ್ಯಾತ್ಮನಾಗಿ........।

ಅನುಭಾವದ ಸಾಧನೆಗೆ ದೃಢ ಮನಸ್ಸು ಅಗತ್ಯವಾದಂತೆ ದೇಹದ ಪರಿಶುದ್ಧತೆಯೂ ಅಗತ್ಯವಾಗುತ್ತದೆ. ಇಲ್ಲಿ ಧಾನ್ಯಗಳನ್ನು ಕುಟ್ಟಿ ಕೇರಿ ಹಸನಾಗಿಸಿ, ಶುದ್ಧ ಸ್ವಚ್ಛ ಪಾತ್ರೆಗಳಲ್ಲಿ ಬೇಯಿಸಿ, ಕುದಿಸಿ ಪಕ್ವಾನ್ನ ತಯಾರಿಸಿಕೊಂಡು ದೇಹವನ್ನು ಸಂತೃಪ್ತಿಪಡಿಸಿಕೊಳ್ಳುವುದು ಮಾನವನ ಸಹಜಕರ್ಮ. ಈ ಅಡುಗೆ ರೂಪಕವನ್ನು ಕನಕದಾಸರು ಅಂತರಾತ್ಮ ನಿರ್ಮಲಗೊಳ್ಳುವತ್ತ ಅರಹುತ್ತಾರೆ. ಅರಿಷಡ್ವರ್ಗಗಳನ್ನು ತರಿದು, ಮಮತೆ ಪ್ರೀತಿಗಳಿಂದ, ತನುಮನಗಳಿಗೆ ಜ್ಞಾನದ ರಸಪಾಕ ಉಣ್ಣಿಸಬೇಕೆನ್ನುತ್ತಾರೆ. ದೇಹ ಮನಸ್ಸುಗಳನ್ನು ಸೃಷ್ಟಿಸಿದವನು ಭಗವಂತ. ಅವನೇ ಸರ್ವಸ್ವ. ಅವನಿಲ್ಲದ ಲೋಕದಲ್ಲಿ ಏನೂ ಇಲ್ಲವೆಂಬ ಅನುಭಾವಿಕ ಸತ್ಯವನ್ನು ಹೊರಹಾಕುತ್ತಾರೆ.

ದಾಸ ಸಾಹಿತ್ಯದ ಕಾಲಘಟ್ಟವನ್ನು ದಾಟಿದರೆ ಮತ್ತೆ ಅನುಭಾವದ ಬಹುದೊಡ್ಡ ಕುರುಹುಗಳು ಕಾಣಿಸುವುದು ಸಂತರು ಮತ್ತು ತತ್ವಪದಕಾರರಲ್ಲಿ. ಇವರು ಯಾವುದೇ ಒಂದು ದೈವದ ಸರ್ವೋತ್ತಮತ್ವದ ಪ್ರತಿಪಾದಕರಲ್ಲ ಮತ್ತು ದೈವ ಅವರ ಸಾಧನೆಗೆ ಬೋಧಕ್ಕೆ ಅದು ಒಂದು ಸಂಕೇತವಷ್ಟೇ. ಅವರು ಯಾವುದೇ ಮತ ಮಾನ್ಯ ಕಟ್ಟದೆ, ಇದ್ದವುಗಳನ್ನು ತಿರಸ್ಕರಿಸದೆ, ಆದರೆ ಅವುಗಳನ್ನು ವಿಮರ್ಶಿಸುತ್ತಾ, ಯಾವುದೇ ರಾಜಮುಖಂಡರ ಆಶ್ರಯವನ್ನು ಬಯಸದೆ ಜನರ ನಡುವೆ ಕ್ರಿಯಾಶೀಲರಾಗಿ ಬದುಕಿದ್ದುದು ಕಂಡುಬರುತ್ತದೆ. ವಚನಕಾರರದು ಒಂದು ಸಂಘಟಿತ, ಒಂದು ಪ್ರದೇಶದ ಕೇಂದ್ರಿತ ಚಳುವಳಿಯಾದರೆ ತತ್ವಪದಕಾರರದು ಅಸಂಘಟಿತ ವಿಕೇಂದ್ರಿತ ಚಳುವಳಿ.

ತತ್ವಪದಕಾರರಲ್ಲಿ ಎದ್ದುಕಾಣುವ ಬಹುದೊಡ್ಡ ಅನುಭಾವಿಯೆಂದರೆ ಸಂತ ಶಿಶುನಾಳ ಶರೀಫರು. ದೈನಂದಿನ ಬದುಕಿನ ಎಲ್ಲ ಅನುಭವಗಳನ್ನು ಸಾಂಕೇತಿಕವಾಗಿ ಆಧ್ಯಾತ್ಮಿಕ ನೆಲೆಗೆ ಏರಿಸಿದ ಸಾಧನೆ ಆತನ ಪದಗಳಲ್ಲಿದೆ. ಆತನೊಬ್ಬ ಜನಪ್ರಿಯ ಅನುಭಾವಿ ಕವಿ. ಆತ ತನ್ನ ಪದಗಳಲ್ಲಿ ಏನೇ ಹೇಳಿದರೂ ಅವುಗಳಲ್ಲಿ ಅನುಭಾವ ಅಡಕಗೊಂಡಿರುವುದನ್ನು ಗುರುತಿಸಬಹುದು. "ಪ್ರಪಂಚದಲ್ಲಿ ತಾನು ಕಂಡ ವಸ್ತು, ಪ್ರಾಣಿಗಳ ಸಂಕೇತ ದೃಷ್ಟಾಂತಗಳ ಮೂಲಕ, ಒಗಟಿನ ಮಾದರಿಯಲ್ಲಿ ತಮ್ಮ ಅನುಭಾವಗಳನ್ನು ಅಭಿವ್ಯಕ್ತಿಸುವಲ್ಲಿ ಶರೀಫರ ಹಾಡುಗಳು ಗಮನಾರ್ಹವಾಗಿವೆ. ವೃತ್ತ ಪ್ರತಿಮೆಗಳ ಮೂಲಕ ಅನುಭಾವವನ್ನು ವೈವಿಧ್ಯಮಯವಾಗಿ ಹಾಗೂ ಕಾವ್ಯಾತ್ಮಕವಾಗಿ ಹೇಳುವಲ್ಲಿ ಶರೀಫರದು ಎತ್ತಿದ ಕೈ. ಈ ರೀತಿಯ ಅಭಿವ್ಯಕ್ತಿಯನ್ನು ಇನ್ನುಳಿದ ತತ್ವಪದಕಾರರ ಹಾಡುಗಳಲ್ಲಿ ಕಾಣಿಸುವುದು ವಿರಳ"[೨] ಎಂಬ ಡಾ. ವಿಜಯಶ್ರೀ ಸಬರದ ಅವರ ಮಾತುಗಳು ಇಲ್ಲಿ ಉಲ್ಲೇಖನಾರ್ಹ.

ಶರೀಫರ ತತ್ವಪದಗಳು ಅಥವಾ ಅನುಭಾವ ಗೀತೆಗಳಲ್ಲಿ ಸಂಸಾರದ ನಿಸ್ಸಾರತೆ, ಜೀವನದ ಕ್ಷಣಿಕತೆ, ವಿರಕ್ತಿ, ಜ್ಞಾನ, ಯೋಗಸಾಧನೆ ಮುಂತಾದವುಗಳ ನಿರೂಪಣೆಯಿದ್ದರೂ ಅವುಗಳನ್ನು ಒಂದು ಸಂದರ್ಭ ಅಥವಾ ಘಟನೆಯ ಅನುಭವದ ರೀತಿಯಲ್ಲಿ ಹೇಳುವ ಕಲೆ ಶರೀಫರಿಗೆ ಸಿದ್ಧಿಸಿದೆ. ನಿಗೂಢ ಅನುಭವಗಳನ್ನು ಅಷ್ಟೇ ರಹಸ್ಯಾತ್ಮಕ ರೀತಿಯಲ್ಲಿ ಒಗಟಿನಂತೆ ಮುಂದಿಡುವ ಅವರ ಗೀತೆಗಳು ಅಮೂರ್ತ ಅನುಭವದ ಹಲವು ಮಗ್ಗುಲುಗಳನ್ನು ಸ್ಪರ್ಶಿಸುತ್ತ ಸಾಗುತ್ತವೆ. ಉದಾಹರಣೆಗೆ,

ಹಾವು ತುಳಿದೇನೆ ಮಾನಿನಿ।
ಹಾವು ತುಳಿದೇನೆ ॥ ಪ ॥
........................................
ಹಾವು ತುಳಿದು ಹಾರಿ ನಿಂತೆ
ಜೀವ ಕಳವಳಿಸಿತೆನೆ ಗೆಳತಿ.... ।

ಹಾವು ಇಲ್ಲಿ ಮಾಯೆಯ ಪ್ರತೀಕವೂ, ಸಂಸಾರದ ಸಂಕೇತವೂ ಆಗಿದೆ. ಇಲ್ಲಿ ಕಾಮವು ಹಾವಾಗಿ ಪರಿವರ್ತನೆಗೊಂಡಿದೆ. ಸಾಕ್ಷಾತ್ ಶಿವನನ್ನೇ ತನ್ನ ತೋಳಬಂಧಿಯಾಗಿಸಿಕೊಂಡ ಈ ಹಾವಿನ ಹಿಡಿತಕ್ಕೆ ಸಿಕ್ಕ ಮೇಲೆ ಮನುಷ್ಯನ ಜೀವ ಕಳವಳಿಸದೆ ಇರಲು ಸಾಧ್ಯವೇ? ಆದರೂ ಆತ ಸಂಸಾರವೆಂಬ ಹಾವು ತುಳಿದೂ ಕಚ್ಚಿಸಿಕೊಳ್ಳದೆ ಪಾರಾದ ಅನುಭವವನ್ನು ಇಲ್ಲಿ ಅನುಭಾವದ ನೆಲೆಗೇರಿಸಿ ಹಾಡಿದ್ದಾನೆ. ಗಂಡನ ಮನೆಗೆ ಹೋಗಲು ಸಿದ್ಧಳಾಗಿ ನಿಂತ ಹೆಣ್ಣೊಬ್ಬಳ ಅಣ್ಣನ ಸ್ಥಾನದಲ್ಲಿ ನಿಂತು ಶರೀಫ ಹೀಗೆ ಹಾಡುತ್ತಾನೆ.

ಅಳಬ್ಯಾಡ ತಂಗಿ ಅಳಬ್ಯಾಡ । ನಿನ್ನ
ಕಳುಹ ಬಂದವರೆಲ್ಲ ಉಳುಹಿಕೊಂಬುವರೇನೆ ॥

ಈ ಪದದಲ್ಲಿನ ಸಂಗತಿ ನಿತ್ಯ ನಡೆಯುವಂಥದೇ. ಪ್ರಪಂಚದಲ್ಲಿ ಯಾರು ಯಾರನ್ನೂ ಉಳಿಸಿಕೊಳ್ಳಲಾರರು ಎಂಬ ತನ್ನ ನಿಜ ನೆಲೆಯ ಅರಿವಿರುವ ಅನುಭಾವಿಯೊಬ್ಬನ ಅನುಭಾವವನ್ನು ಈ ಪದ ಒಳಗೊಂಡಿದೆ. "ವಿವಾಹವಾದ ಹೆಣ್ಣು ಮೊದಲ ಸಲ ಅತ್ತೆಯ ಮನೆಗೆ ಹೋಗುವ ಭಾವಮಯವಾದ ಸನ್ನಿವೇಶವನ್ನು ಬಳಸಿ ಬರೆದು ಈ ಪದ್ಯ ಬೇರೆ ಒಂದು ಅರ್ಥಕ್ಕೆ ಹಬ್ಬುವುದನ್ನೂ

ಕಾಣಬಹುದು. 'ಮಿಡಿಕ್ಯಾಡಿ ಮದಿವ್ಯಾದಿ ಹುಡುಕಾಡಿ ಮಾಯದ ಮರವೇರಿದಿ' ಎಂಬೆಲ್ಲ ಮಾತುಗಳು ಜೀವ ತಾನಾಗಿ ಭೋಗಕ್ಕೆ ಮಾಯೆಗೆ ಒಲಿದದ್ದನ್ನು ಸೂಚಿಸುತ್ತವೆ. ತವರುಮನೆ ಜೀವದ ನಿಜನೆಲೆಗೆ ರೂಪಕವಾಗುತ್ತದೆ"[೩] ಎನ್ನುತ್ತಾರೆ.

ಜೀವ ಬಯಸುವ ಅನುಭಾವದೆತ್ತರವನ್ನು ತಲುಪಲಾಗುತ್ತಿಲ್ಲವಲ್ಲಾ ಎಂಬ ಕಳವಳವನ್ನು 'ಸೋರುತಿಹುದು ಮನೆಯ ಮಾಳಿಗಿ' ಎಂಬ ಕವಿತೆ ಪ್ರತಿಮಾತ್ಮಕವಾಗಿ ಪ್ರತಿಬಿಂಬಿಸುತ್ತದೆ.

ಸೋರುತಿಹುದು ಮನೆಯ ಮಾಳಿಗಿ । ಅಜ್ಞಾನದಿಂದ
ಸೋರುತಿಹುದು ಮನೆಯ ಮಾಳಿಗೆ ॥

.......................................................................

ಕಾಂತೆ ಕೇಳೆ ಕರುಣದಿಂದ
ಬಂತು ಕಾಣೆ ಹುಬ್ಬಿ ಮಳೆಯು
ಎಂತೊ ಶಿಶುನಾಳಧೀಶನು ತಾನು
ನಿಂತು ಪೊರೆವನು ಎಂದು ನಂಬಿದೆ ।

ಇಲ್ಲಿ ಮನೆ ಎಂಬುದು ಮನಸ್ಸು. ಆ ಮನಸ್ಸಿನ ಸೂರು ಗಟ್ಟಿಯಾಗಿಲ್ಲ. ಇಂದ್ರಿಯಗಳ ಹತೋಟಿಯಿಂದ ಮುಕ್ತವಾಗದ ಮನಸ್ಸು ಅವುಗಳ ಮಂಗಕುಣಿತಕ್ಕೆ ಸಿಕ್ಕು ಜರ್ಜರಿತವಾಗಿದೆ. ಮೋಹ ಪಾಶಗಳು ಕವಿಸಿದ ಕತ್ತಲೆಯನ್ನು ದಾಟಿ ಚೈತನ್ಯದ ಬೆಳಕನ್ನು ಕಾಣಲಾಗದ ಅಸಹಾಯಕತೆ ಬಂದೊದಗಿದೆ. ಮುರುಕು ತೊಲೆ, ಹುಳುಕು ಜಂತಿ, ಹರಕು ಚಪ್ಪರ ಇವೆಲ್ಲ ಮನಸ್ಸಿನ ಅಸ್ಥಿರತೆ, ಅಭದ್ರತೆಯನ್ನು ಸೂಚಿಸುತ್ತವೆ. ಈ ಶಿಥಿಲತೆ ಲೌಕಿಕ ಬದುಕಿನ ಒಟ್ಟಾರೆ ಸ್ಥಿತಿಯಾಗಿದೆ. ಇಂಥ ಕಳವಳದ ಅಗ್ನಿ ದಿವ್ಯವನ್ನು ದಾಟುವುದು ಇಲ್ಲಿ ಅನಿವಾರ್ಯವಾಗಿದೆ.

ಕವಿತೆಯ ಮೊದಲ ಭಾಗದಲ್ಲಿ ಮಳೆ ಹರಕು ಮುರುಕು ಕಿಂಡಿಗಳಲ್ಲಿ ನುಗ್ಗಿ ಅಲ್ಲೋಲ ಕಲ್ಲೋಲ ಉಂಟುಮಾಡುತ್ತದೆ. ಆದರೆ ಮುಂದೆ ಅದೇ ಮಳೆಯ ಮಾಯೆಯಲ್ಲಿ ಅದರ ರೀತಿಯಲ್ಲಿ ಒಳ, ಹೊರಗುಗಳ ಭೇಧವಳಿದು 'ಏಕ'ವಾಗುವಿಕೆ ಸಾಧ್ಯವಾಗುತ್ತದೆ. ಆ ಆನಂದದ ಭಾವದಲ್ಲಿ ಮಳೆಯೆಂದರೆ ಭಯವಿಲ್ಲ. ಮನೆ ಬಯಲುಗಳು ಒಂದಾಗಿರುವುದರಿಂದ ಸೋರುವ ಆತಂಕವೂ ಇಲ್ಲ. ಆಗ ಅದು ಚೈತನ್ಯದ ಮಳೆಯಾಗುತ್ತದೆ. ಶಿಶುನಾಳಧೀಶ ಕಾಯುವನೆಂಬ ಭರವಸೆಯಾಗಿ ಸುರಿದ ಕಾರುಣ್ಯದ ಮಳೆಯಾಗುತ್ತದೆ. ಮೊದಲು ಕತ್ತಲು ಕವಿದು ಭಯ ಹುಟ್ಟಿಸಿದ್ದ ಬದುಕು ಕಡೆಗೆ ದೈವದ ಕರುಣೆಯಲ್ಲಿ ಭರವಸೆಯ ಬೆಳಕಾಗುತ್ತದೆ. ಇದೇ ಅಂತಿಮವಾಗಿ ಶರೀಫರು ಕಂಡುಕೊಳ್ಳುವ ಅನುಭಾವದ ಪ್ರಕ್ರಿಯೆ.

ಹೀಗೆ ಅತ್ಯಂತ ಸರಳವೂ ಅಲ್ಲದ, ಉಪದೇಶಾತ್ಮಕವೂ ಆಗಿರದ ಅಂತರ್ಬೋಧೆಯ ಅರಿವಿನ ಹುಡುಕಾಟದ ಮಾರ್ಗವೇ ಆಗಿರುವ 'ಅನುಭಾವ'ವು ಪ್ರಸ್ತುತ ಜಾಗತಿಕ ಸಂದರ್ಭಕ್ಕೆ ಅನಿವಾರ್ಯವಾಗಿದೆ. ಒಂದು ಸಣ್ಣ ಹಳ್ಳಿಯೂ ಇಂದು ಏಕಕಾಲಕ್ಕೆ ಗ್ಲೋಬಲ್ ಆಗಿಯೂ, ದೇಸಿಯಾಗಿಯೂ ತನ್ನ ಚಹರೆಗಳನ್ನು ಬದಲಿಸಿಕೊಳ್ಳುತ್ತಲಿದೆ. ಬಡತನ, ಭಯೋತ್ಪಾದನೆ, ಭಾಷಾಂಧತೆ, ಮತಾಂತರದ ಬಿಕ್ಕಟ್ಟುಗಳು, ಆರ್ಥಿಕ ಮುಗ್ಗಟ್ಟು, ತಂತ್ರಜ್ಞಾನದ ಸವಲತ್ತುಗಳು, ವಿಘಟಿತವಾಗಿರುವ ಸಂಬಂಧಗಳು, ಹೆಚ್ಚುತ್ತಿರುವ ಅಪರಾಧಗಳು, ಸಮಯವನ್ನು ಹಣದ ಮಾಪಕವಾಗಿ ಗುಣಿಸುತ್ತಾ ದುಡಿಮೆಯ ಯಂತ್ರವಾಗಿರುವ ಮಾನವನು ಇವೆಲ್ಲವುಗಳಿಂದ ಮುಕ್ತಿ ಹೊಂದಲು 'ಅನುಭಾವ'ದ ಚಿಂತನೆಯೆಡೆಗೆ ಆಲೋಚಿಸುವ ಅನಿವಾರ್ಯತೆಯಿದೆ ಎಂಬುದು ನನ್ನ ಅಭಿಪ್ರಾಯ.

**ಕೊನೆ ಟಿಪ್ಪಣಿ:**


೧. ಡಾ.ಹೆಚ್.ತಿಪ್ಪೇರುದ್ರಸ್ವಾಮಿ – ಕನಕದಾಸರ ಅನುಭಾವದ ಗೀತೆಗಳು – ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು.

೨. ಡಾ.ವಿಜಯಶ್ರೀ ಸಬರದ – ಕಡಕೋಳ ಮಡಿವಾಳಪ್ಪ ಹಾಗೂ ಶಿಶುನಾಳ ಶರೀಫರ ಹಾಡುಗಳಲ್ಲಿ ಅನುಭಾವದ ಅಭಿವ್ಯಕ್ತಿ. ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು. ಪುಟ. ೧೪೩.

೩. ಲಕ್ಷ್ಮೀನಾರಾಯಣಭಟ್ಟ ಎನ್.ಎಸ್ (ಸಂ) – ಶರೀಫರ ಸಾಹೇಬರ ಗೀತೆಗಳು, ಸಪ್ನ ಬುಕ್ ಹೌಸ್, ಬೆಂಗಳೂರು. ಪುಟ ೩೪.

**ಪರಾಮರ್ಶನ ಗ್ರಂಥಗಳು:**


೧. ಡಾ.ಶ್ರೀರಾಮ ಅಚನೂರ – ಕನಕದಾಸರ ಚಿಂತನೆಯ ನೆಲೆ ಮತ್ತು ದರ್ಶನ, ಗಗನ ಪ್ರಕಾಶನ, ಶಿರೂರು, ಬಾಗಲಕೋಟೆ ಜಿಲ್ಲೆ.
೨. ಡಾ.ಎನ್.ಆರ್. ಲಲಿತಾಂಬ – ಸಂಪ್ರೀತಿ, ಪರಸ್ಪರ ಪ್ರಕಾಶನ, ಬೆಂಗಳೂರು.
೩. ಡಾ.ವ್ಹಿ.ಜಿ.ಪೂಜಾರ – ಸಾಹಿತ್ಯಾನ್ವೇಷಣೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೪. ಡಾ.ಗೀತಾ ವಸಂತ – ಬೆಳಕಿನ ಬೀಜ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.
೫. ಡಾ.ಆರ್.ಪಿ.ಹೆಗಡೆ – ಶಿಶುನಾಳ ಶರೀಫ ಮತ್ತು ಸಂತ ಕಬೀರ: ತೌಲನಿಕ ಅಧ್ಯಯನ, ಸಮಾಜ ಶಿಕ್ಷಣ ವಿಶ್ವಸ್ಥ ಸಮಿತಿ, ಸಿದ್ಧಾಪುರ.